ಹಿಂದುಳಿದ ಬೀಳಗಿ ಕ್ಷೇತ್ರದಲ್ಲಿ ಬರುವುದರಿಂದ ಆ ಪ್ರದೇಶವನ್ನು ಯಾವುದಾದರೂ ಅಭಿವೃದ್ಧಿ ಮಂಡಲಿಗೆ ಸೇರಿಸಿ, ಅದನ್ನು ಯಾವಾಗ ಸೇರಿಸುತ್ತೀರಿ ಅಂತ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಚಂದ್ರಗೌಡ: ಈಗಿರುವ ಮೂರೂ ಮಂಡಲಿಗೆ ಸೇರದೇ ಇರುವುದಕ್ಕೆ ಬೇರೆ ವಿಶೇಷ ವ್ಯವಸ್ಥೆ ಇದೆ. ನೀವು ಈಗ ನಿಮ್ಮ ಪ್ರಸ್ತಾವನೆಯನ್ನು ಸೇರಿಸುವ ಬಗ್ಗೆ ಮನವಿ ಮಾಡುತ್ತಿರುವುದರಿಂದ ಸಚಿವ ಸಂಪುಟದಲ್ಲಿ ಅದನ್ನು ಚಿಂತಿಸಲಾಗುವುದು. ಹಾಲಿ ತಾಲ್ಲೂಕನ್ನು ಒಂದು ಯೂನಿಟಾಗಿ ಪರಿಗಣಿಸಿ ಈ ಮೂರೂ ಬೋರ್ಡಿನ ವ್ಯಾಪ್ತಿಗೆ ಸೇರದೇ ಇರುವುದಕ್ಕೆ ಸರ್ಕಾರದ ವಿವಿಧ ಯೋಜನೆಗಳಿಂದಲೇ ಅಲ್ಲಿ ಕೆಲಸವಾಗಬೇಕು ಅಂತ ತೀರ್ಮಾನವಾಗಿದೆ.

ವಿಶೇಷ ಪ್ಯಾಕೇಜ್

67 (602) – ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಉಂಟಾದ ಪ್ರವಾಹದಿಂದಾಗಿ ರಸ್ತೆ, ಪಿಕಪ್, ಕೆರೆ ಮತ್ತು ಸೇತುವೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತಾಲ್ಲೂಕಿಗೆ ಪರಿಹಾರಕ್ಕಾಗಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಇಲ್ಲದಿದ್ದಲ್ಲಿ, ನಷ್ಟಗೊಂಡಿರುವ ರಸ್ತೆ, ಪಿಕಪ್, ಕೆರೆ ಮತ್ತು ಸೇತುವೆಗಳನ್ನು ಯಾವ ಯೋಜನೆಯಡಿಯಲ್ಲಿ ಸುಸ್ಥಿತಿಗೆ ತರಲಾಗುವುದು?

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು)–

ಅ) ಹೌದು

ಆ) ಇಲ್ಲ

ಇ) ಪ್ರವಾಹ ಪರಿಹಾರ ಯೋಜನೆಯಡಿಯಲ್ಲಿ ರಸ್ತೆ, ಪಿಕಪ್, ಕೆರೆ ಮತ್ತು ಸೇತುವೆಗಳನ್ನು ಸುಸ್ಥಿತಿಗೆ ತರಲಾಗಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು: ಅಧ್ಯಕ್ಷರೇ, ನಮ್ಮಲ್ಲಿ ಮಳೆ ಬಂದು ಬಹಳಷ್ಟು ಹಾನಿಯಾಗಿದೆ. ಆದರೆ ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದೇವೆ ಅಂತ ಸಚಿವರು ಉತ್ತರ ಕೊಟ್ಟಿದ್ದಾರೆ. ಲಿಂಗನಮಕ್ಕಿ ಡ್ಯಾಂ 15 ವರ್ಷಗಳ ನಂತರ

ತುಂಬಿದೆ. ಮಳೆ ಹಾನಿಯಿಂದ ಸೇತುವೆ ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ಆದರೆಸರ್ಕಾರ ಕೇವಲ 50 ಲಕ್ಷ ಕೊಟ್ಟಿದೆ. 50 ಲಕ್ಷದಲ್ಲೇ ಎಲ್ಲ ಕೆಲಸ ಮಾಡಿ ಮುಗಿಸಿದ್ದೇವೆ ಅಂತ ಸರ್ಕಾರ ಉತ್ತರಿಸಿದೆ.

ಶ್ರೀ ಜಗದೀಶ ಶೆಟ್ಟರ್ [ಕಂದಾಯ ಸಚಿವರು]: ಅಧ್ಯಕ್ಷರೇ 2006–07ಕ್ಕೆ ಶಿವಮೊಗ್ಗ ಜಿಲ್ಲೆಗೆ ನೆರೆಹಾವಳಿ ಪರಿಹಾರದಡಿ ರೂ. 5.29 ಕೋಟಿ ಸರ್ಕಾರ ಮಂಜೂರು ಮಾಡಿತ್ತು. ಅದರಿಂದ ಸಾಗರ ತಾಲ್ಲೂಕಿಗೆ 50 ಲಕ್ಷಗಳನ್ನು ಬಿಡುಗಡೆ ಮಾಡಿದ್ದೇವೆ. ಅದರಿಂದ 23 ರಸ್ತೆ ಕಾಮಗಾರಿಗಳನ್ನು ಕೈಗೊಂಡಿದ್ದೇವೆ. 11 ಸೇತುವೆ ಮೋರಿಗಳ ಕಾಮಗಾರಿ ತೆಗೆದುಕೊಂಡಿದ್ದೇವೆ. 3 ಕೆರೆ ಕಾಲುವೆ ಕೆಲಸವಾಗಿದೆ. ಹೀಗೆ 39 ಕಾಮಗಾರಿಗಳನ್ನು ಸಾಗರ ತಾಲ್ಲೂಕಿನಲ್ಲಿ ಕೈಗೊಳ್ಳಲಾಗಿದೆ. ಸರ್ಕಾರದ ಇತಿಮಿತಿಯಲ್ಲಿ ಶಿವಮೊಗ್ಗ ಜಿಲ್ಲೆಗೇನು ಹಣ ಬಿಡುಗಡೆಮಾಡಿದ್ದೇವೆ ಅದರಿಂದ ಇಷ್ಟು ಕೆಲಸ ಮಾಡಿದ್ದೇವೆ.

ಶ್ರೀ ಗೋಪಾಲಕೃಷ್ಣ ಬೇಳೂರು: ರೂ.9.5 ಕೋಟಿಯಲ್ಲಿ 50 ಲಕ್ಷ ಸರ್ಕಾರ ಕೊಟ್ಟಿದೆ. ಹೋದ ವರ್ಷ ಸಾಧಾರಣ ಮಳೆಯಾಗಿದ್ದಾಗಲೂ 1.60 ಕೋಟಿ ಕೊಟ್ಟಿದ್ದರು. ನಮಗೆ ಬಂದಿರುವ 50 ಲಕ್ಷ ರೂಪಾಯಿಯಲ್ಲಿ ಇವತ್ತು ಯಾವುದೇ ಸಂಪರ್ಕವನ್ನು ಮಾಡುವುದಕ್ಕಾಗುತ್ತಿಲ್ಲ. ಇತ್ತ ಕಡೆ ಸರ್ಕಾರ ಗಮನವನ್ನು ಹರಿಸಬೇಕು. ಒಂಭತ್ತೂವರೆ ಕೋಟಿ ಲಾಸ್ ಆಗಿರುವುದಕ್ಕೆ 50 ಲಕ್ಷ ರೂ.ಗಳನ್ನು ತಾಲ್ಲೂಕಿಗೆ ಕೊಟ್ಟರೆ, ನಾವು 31 ಕೆಲಸಗಳನ್ನು ತೆಗೆದುಕೊಂಡಿದ್ದೇವೆ, ಅದು ಯಾವುದೇ ಹೋಬಳಿಗೂ ಸಾಕಾಗುತ್ತಿಲ್ಲ. ಅಷ್ಟೊಂದು ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು. ಇವತ್ತು ಲಿಂಗನಮಕ್ಕಿ ಡ್ಯಾಮ್ ತುಂಬಿ ಸರ್ಕಾರಕ್ಕೆ 250 ಕೋಟಿ ರೂ.ಲಾಭ ಬಂದಿದೆ. ಆದ್ದರಿಂದ ತಾವು ದಯವಿಟ್ಟು ಒಂದು package ಮೂಲಕ ನಮ್ಮ ತಾಲ್ಲೂಕಿಗೆ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ತನ್ನ ಆರ್ಥಿಕ ಇತಿಮಿತಿಯನ್ನು ನೋಡಿಕೊಂಡು ಸಾಗರ ತಾಲ್ಲೂಕಿಗೆ ಇನ್ನೂ ಎಷ್ಟು ಸಾಧ್ಯ ಇದೆ, ಅಷ್ಟು ಪರಿಹಾರಧನವನ್ನು ಕೊಡುವುದಕ್ಕೆ ಸರ್ಕಾರ ಚಿಂತನೆಯನ್ನು ಮಾಡುತ್ತದೆ.